# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 176 | Pages. 2 | Date: 19-05-2025, MONDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 176 - ಪುಟಗಳು : 2 - 19 ಮೇ 2025 ಸೋಮವಾರ | Ph: 8762954248 | ದರ : ₹1


# ರಾಸು ಸಾಕಣೆಯಲ್ಲಿ ಕರ್ನಾಟಕ ಪ್ರಥಮ

## ಜಿಲ್ಲಾ ಪ್ರಾಣಿ ಪ್ರಯೋಗಾಲಯಕ್ಕೆ ಶಂಕುಸ್ಥಾಪನೆ | ಸಚಿವ ವೆಂಕಟೇಶ್ ಮಾಹಿತಿ


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಸುಗಳ ಸಾಕಾಣಿಕೆಯಲ್ಲಿ ದೇಶದಲ್ಲಿಯೇ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ಅತಿಹೆಚ್ಚು ರಾಸುಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಬೆಳಗಾವಿ ಮೊದಲ ಮತ್ತು ಹಾಸನ 2ನೇ ಸ್ಥಾನದಲ್ಲಿದೆ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ನಗರದ ಸಂತೇಪೇಟೆ ವೃತ್ತದಲ್ಲಿರುವ ಪಶು ಸಂಗೋಪನೆ ಇಲಾಖೆ ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಭಾನುವಾರ ಆರ್‌ಐಡಿಎಫ್ ಟ್ರಾಂಚ್ 28ರ ಯೋಜನೆಯಡಿ ಜಿಲ್ಲಾ ಪ್ರಾಣಿ ಪ್ರಯೋಗಾಲಯ (ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ)ದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ರೈತರಿಗೆ ಅನುಕೂಲ ಕಲ್ಪಿಸುವ ಜವಾಬ್ದಾರಿ ನಮ್ಮ ಮೇಲಿದೆ. ರೈತರಿಗೆ ಪ್ರಯೋಜನವಾಗಲಿ ಎಂದು ಪ್ರಯೋಗಾಲಯ ನಿರ್ಮಿಸಲಾಗುತ್ತಿದೆ. ಜಿಲ್ಲೆಯ ರೈತರು ಇದರ ಸದುಪಯೋಗ ಪಡೆಯಬೇಕು ಎಂದರು.

ರಾಜ್ಯದಲ್ಲಿ ಹೊಸದಾಗಿ 200 ಪಶು ಆಸ್ಪತ್ರೆಗಳು, 20 ಪಾಲಿ ಕ್ಲಿನಿಕ್‌ಗಳನ್ನು ಆರ್‌ಡಿಎಫ್ ಟ್ರಾಂಚ್-30 ಯೋಜನೆಯಡಿ ಸ್ಥಾಪಿಸಲಾಗುತ್ತಿದೆ. ಕಳೆದ ವರ್ಷ ತಾಲ್ಲೂಕು ಮಟ್ಟದಲ್ಲಿ 20 ಪಾಲಿ ಕ್ಲಿನಿಕ್ ಪ್ರಾರಂಭ ಮಾಡಲಾಗಿದೆ.



> ಪಶುಪಾಲನಾ ಇಲಾಖೆಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚೆ ನಡೆಸಿದ್ದು ಹಂತ ಹಂತವಾಗಿ ಪರಿಹಾರ ಕಂಡುಕೊಳ್ಳಲಾಗುವುದು
>
> - ಕೆ. ವೆಂಕಟೇಶ್, ಪಶು ಸಂಗೋಪನೆ ಸಚಿವ

ಈ ವರ್ಷ 200 ಹೊಸ ಕಟ್ಟಡಕ್ಕೆ ಮಂಜುರಾತಿ ದೊರೆತಿದೆ. 400 ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ತೆಗೆದುಕೊಳ್ಳ ಲಾಗಿದೆ. 700 ಡಿ ಗ್ರೂಪ್ ನೌಕರರ ನೇಮಿಸಿಕೊಳ್ಳಲು ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು.

### 1.81 ಕೋಟಿ ರೂ. ವೆಚ್ಚ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ. ರಮೇಶ್ ಮಾತನಾಡಿ, ಸದರಿ ಪ್ರಯೋಗಾಲಯವನ್ನು 1.81 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಜಾನುವಾರುಗಳಲ್ಲಿ ಕಂಡು ಬರುವ ವಿವಿಧ ರೋಗಗಳ ಕುರಿತು ಪರೀಕ್ಷೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವ ನಿಟ್ಟಿನಲ್ಲಿ ಪ್ರಯೋಗಾಲಯ ಸಹಕಾರಿ ಆಗುತ್ತದೆ ಎಂದು ತಿಳಿಸಿದರು.

ಇದೆ ವೇಳೆ ಆಕಸ್ಮಿಕ ಸಾವಿಗೀಡಾದ ಕುರಿಗಳಿಗೆ ಅನುಗ್ರಹ ಯೋಜನೆಯಡಿ ಕುರಿಗಳ ಮಾಲೀಕರಿಗೆ ಪರಿಹಾರದ ಚೆಕ್ ವಿತರಣೆ ಮಾಡಲಾಯಿತು.

ರಾಜ್ಯ ಕುಕ್ಕುಟ ಮಂಡಳಿ ಅಧ್ಯಕ್ಷ ಹರೀಶ್, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಆಯುಕ್ತೆ ರೂಪ, ನಿರ್ದೇಶಕ ಡಾ. ಮಂಜುನಾಥ್ ಪಾಳೆಗಾರ್, ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲ ಉಪಸ್ಥಿತರಿದ್ದರು.

ಕೃಷಿಕರು ಹೈನುಗಾರಿಕೆಯನ್ನು ಉಪ ಕಸುಬಾಗಿ ಸ್ವೀಕರಿಸಿದ್ದಾರೆ. ಜಿಲ್ಲೆಯ ಜನರು ಬಹಳ ಪ್ರೀತಿಯಿಂದ ಹೈನುಗಾರಿಕೆ ಮಾಡುತ್ತಿದ್ದಾರೆ. ಪ್ರಸ್ತುತ ಸರ್ಕಾರ ಎರಡು ಬಾರಿ ಹಾಲಿನ ದರ ಹೆಚ್ಚಳ ಮಾಡಿದೆ. ಒಂದು ಲೀಟರ್ ಹಾಲಿಗೆ 3 ರೂ. ಹಾಗು 4 ರೂ. ಸೇರಿ 7 ರೂ. ಹೆಚ್ಚಳ ಮಾಡಿದಂತಾಗಿದೆ ಎಂದು ತಿಳಿಸಿದರು.

### ಸೌಲ ಸೌಲಭ್ಯ ಹೆಚ್ಚಳಕ್ಕೆ ಮನವಿ

ಶಾಸಕ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಪಶು ಸಂಗೋಪನೆ ದೇಶದ ಹಾಗು ರೈತಾಪಿ ವರ್ಗದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಗ್ರಾಮೀಣ ಪ್ರದೇಶದ ಬಡವರು ಆರ್ಥಿಕ ನೆರವು ಇಲ್ಲದೆ ಹೈನುಗಾರಿಕೆ ಮಾಡಲು ಸಾಧ್ಯವಾಗುತ್ತಿಲ್ಲ. ಅವರಿಗೆ ಸಹಾಯವಾಗುವಂತೆ ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ ಒದಗಿಸಬೇಕು ಎಂದ ಅವರು ಜಾನುವಾರುಗಳಿಗೆ ಔಷಧಿ ಮತ್ತು ಇಂಜೆಕ್ಷನ್ ಗಳನ್ನು ರಿಯಾಯಿತಿ ದರದಲ್ಲಿ ಕಲ್ಪಿಸಬೇಕು ಎಂದು ಕೋರಿದರು.

ನಿರುದ್ಯೋಗಿ ಯುವಕರು ಹೈನುಗಾರಿಕೆಯನ್ನು ಬಹಳ ಉತ್ಕೃಷ್ಟವಾಗಿ ಮಾಡಿದ್ದು, ತಿಂಗಳಿಗೆ 30-40 ಸಾವಿರ ರೂ. ಆದಾಯ ಗಳಿಸುತ್ತಿದ್ದಾರೆ. ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುವ ಯುವಕರು ಹುಟ್ಟೂರಿನಲ್ಲೇ ಹೈನುಗಾರಿಕೆ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಸಚಿವರು ಜನಸ್ನೇಹಿಯಾಗಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಹೊಸ ಪಶು ಚಿಕಿತ್ಸಾಲಯ ತೆರೆಯಲು ಹಾಗೂ ವೈದ್ಯರು ಮತ್ತು ಡಿ ಗ್ರೂಪ್ ನೌಕರರ ಕೊರತೆಯನ್ನು ನೀಗಿಸಲು ಕ್ರಮ ಕೈಗೊಳ್ಳಬೇಕು ಎಂದರು. ಮಹಾನಗರ ಪಾಲಿಕೆ ಮಹಾಪೌರ ಎಂ. ಚಂದ್ರೇಗೌಡ ಮಾತನಾಡಿ, ಮೂಕ ಪ್ರಾಣಿಗಳ ಆರೋಗ್ಯ ಸಂರಕ್ಷಣೆ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಪಶು ಪ್ರಯೋಗಾಲಯ ಪ್ರಾರಂಭ ಮಾಡುತ್ತಿರುವುದು ಸಂತೋಷದ ವಿಷಯ ಎಂದರು.

## ಸಂಸ್ಕೃತಿ ಅಳಿವಿನ ಪರಿಣಾಮ ಘೋರ: ಸಾಹಿತಿ ಸಿದ್ಧರಾಮಯ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಾಹಿತ್ಯ, ಸಂಗೀತ, ಕಲೆಯ ಭವ್ಯ ಪರಂಪರೆಯನ್ನು ಉಳಿಸಿ ಬೆಳೆಸಬೇಕಿದ್ದ ಸರ್ಕಾರಗಳು ಸಂಪೂರ್ಣ ಭಂಡತನ ಪ್ರದರ್ಶಿಸುತ್ತಿವೆ. ಈ ನಡವಳಿಕೆ ಭವಿಷ್ಯದ ದಿನಗಳಲ್ಲಿ ದುಷ್ಪರಿಣಾಮ ಉಂಟುಮಾಡುತ್ತದೆ ಎಂದು ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದರು.



ಮೈಸೂರು ಹಾಗೂ ಹಾಸನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ನಗರದ ಜಿಲ್ಲಾ ಕನ್ನಡ ಸಾಹಿತ್ಯಪರಿಷತ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗೊರುಚ ದತ್ತಿ ನಿಧಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತದೆ. ಸಾಹಿತ್ಯ ಸಂವರ್ಧನೆ ಇಲ್ಲದೆ ಕೇವಲ ಆಡಂಬರದ ಜಾತ್ರೆಗಳ ರೀತಿಯಲ್ಲಿ ಸಮ್ಮೇಳನ ನಡೆಯುತ್ತಿವೆ. ನಮ್ಮಲ್ಲಿ ಎಷ್ಟೋ ಪ್ರತಿಭಾವಂತರು ಪ್ರಶಸ್ತಿಗಳಿಂದ ವಂಚಿತರಾಗಿದ್ದಾರೆ. ಸಾಹಿತ್ಯಕ್ಕಾಗಿಯೇ ಕೆಲಸ ಮಾಡುವವರನ್ನು ಮೂಲೆಗುಂಪು ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಶರಣ ಸಾಹಿತ್ಯ ಪರಿಷತ್ ಪ್ರತಿಭೆಗಳನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಶ್ಲಾಘನೀಯ ಎಂದರು.

ಸಾನ್ನಿಧ್ಯ ವಹಿಸಿದ್ದ ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಮಾತನಾಡಿ, 12ನೇ ಶತಮಾನದಲ್ಲಿನ ಅಸಮಾನತೆ, ಶೋಷಣೆ, ಜಾತೀಯತೆ, ಧರ್ಮಾಂಧತೆಯನ್ನು ಖಂಡಿಸಿ ಸಮಸಮಾಜಕ್ಕೆ ಬುನಾದಿ ಹಾಕಿದ ಕೀರ್ತಿ ಬಸವಾದಿ ಶರಣರಿಗೆ ಸಲ್ಲುತ್ತದೆ. ಇಂತಹ ಅಮೂಲ್ಯ ಸಾಹಿತ್ಯವನ್ನು ಉಳಿಸಲು ಸುತ್ತೂರಿನ ಜಗದ್ಗುರುಗಳು ಶರಣ ಸಾಹಿತ್ಯ ಪರಿಷತ್ ಸ್ಥಾಪಿಸುವ ಮೂಲಕ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಸೋಮಶೇಖರ್ ಮಾತನಾಡಿ, ಜಾನಪದ ಮತ್ತು ಶರಣ ಸಾಹಿತ್ಯ ಪರಿಷತ್ ಕನ್ನಡ ಸಾಹಿತ್ಯ ಲೋಕದ ಎರಡು ಕಣ್ಣುಗಳಿದ್ದಂತೆ. ಈ ಎರಡು ಸಂಸ್ಥೆಗಳ ಸಮ್ಮಿಲನದ ಪ್ರತಿರೂಪವೇ ಗೊ.ರು. ಚನ್ನಬಸಪ್ಪನವರು. ಶರಣ ಸಾಹಿತ್ಯ ಪರಿಷತ್ ನಾಡು, ಹೊರ ಜಿಲ್ಲೆ ಮತ್ತು ವಿದೇಶದಲ್ಲಿ ಪರಿಚಯವಾಗಲು ಗೊರುಚ ಕಾರಣೀಕರ್ತರಾಗಿದ್ದಾರೆ.

ಸುತ್ತೂರಿನ ಈ ಹಿಂದಿನ ಜಗದ್ಗುರುಗಳು ತಮ್ಮ ಜನ್ಮ ದಿನದ ಅಂಗವಾಗಿ ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಎರಡು ದಶಕಗಳ ಕಾಲ ಗೊರುಚ ರಾಜ್ಯಾಧ್ಯಕ್ಷರಾಗಿ ಅವಿರತ ಕೆಲಸ ಮಾಡಿದ್ದಾರೆ. ಶರಣ ಸಾಹಿತ್ಯ ಪರಿಷತ್ತಿಗೆ ಅಗಮ್ಯ ಸೇವೆ ಸಲ್ಲಿಸಿದ ಗೊರುಚ ಅವರ ಹೆಸರಿನಲ್ಲಿ ಇಂದು ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ ಎಂದರು.

### ಮೂವರಿಗೆ ಪ್ರಶಸ್ತಿ ಪ್ರದಾನ

ಶರಣ ಸಾಹಿತ್ಯ ಗ್ರಂಥ ಪ್ರಶಸ್ತಿಯನ್ನು ಡಾ. ಟಿ.ಆರ್. ಚಂದ್ರಶೇಖರ, ಶರಣ ಪ್ರಶಸ್ತಿಗೆ ಡಾ. ಶಾಂತಾ ಇಮ್ರಾಪುರ, ಜಾನಪದ ಪ್ರಶಸ್ತಿಗೆ ಭಾಜನರಾದ ಪ್ರೊ. ಜಗನ್ನಾಥ ಹೆಬ್ಬಾಳೆ ಅವರನ್ನು ಅಭಿನಂದಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜಾನಪದ ಸಾಹಿತ್ಯ ಗ್ರಂಥ ಪ್ರಶಸ್ತಿಗೆ ಆಯ್ಕೆಯಾಗಿದ್ದ ಡಾ. ಮೊಗಳ್ಳಿ ಗಣೇಶ್ ಗೈರು ಹಾಜರಾದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶಗೌಡ, ರಾಜ್ಯ ಸಂಚಾಲಕಿ ಸುಶೀಲಾ ಸೋಮಶೇಖರ, ರಾಜ್ಯ ಕಾರ್ಯದರ್ಶಿ ಸೋಮಶೇಖರ ಗಾಂಜಿ, ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ತೀರ್ಥಕುಮಾರಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್ ಹಾಗೂ ಇತರರಿದ್ದರು.

## 27 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು

### ಅರಣ್ಯ ಸಚಿವರ ಸೂಚನೆ | ಘರ್ಜಿಸಿದ ಜೆಸಿಬಿ, ಸಸಿ ನೆಟ್ಟ ಇಲಾಖೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಸೂಚನೆ ಹಿನ್ನೆಲೆಯಲ್ಲಿ ಭಾನುವಾರ ಅರಣ್ಯಾಧಿಕಾರಿಗಳು ತಾಲ್ಲೂಕಿನ ಬಾಗೂರು ಹೋಬಳಿ ಮಡಬ ಗ್ರಾಮದಲ್ಲಿ 27 ಎಕರೆ ಅರಣ್ಯ ಒತ್ತುವರಿ ಪ್ರದೇಶ ತೆರವು ಮಾಡಿದರು.



ಗ್ರಾಮದ ಸರ್ವೆ ನಂ. 27ರಲ್ಲಿ ಸುಮಾರು 12 ರಿಂದ 15 ಕೋಟಿ ರೂ. ಬೆಲೆ ಬಾಳುವ 26 ಎಕರೆ 33 ಗುಂಟೆ ಅರಣ್ಯ ಜಮೀನನ್ನು ಒತ್ತುವರಿ ಮಾಡಿ, ಇಲ್ಲಿದ್ದ ಮರಗಳನ್ನು ಕಡಿದು ತೋಟ ನಿರ್ಮಾಣಕ್ಕೆ ಮುಂದಾಗಿದ್ದರು. ಈ ಬಗ್ಗೆ ಕಚೇರಿಗೆ ಬಂದ ದೂರು ಆಧರಿಸಿ ಈಶ್ವರ ಖಂಡ್ರೆ ಅವರು, ಕಾನೂನು ರೀತಿ ಕ್ರಮ ಜರುಗಿಸುವಂತೆ ಅರಣ್ಯ ಇಲಾಖೆಗೆ ಅ. 23 ರಂದು ಸೂಚನೆ ನೀಡಿದ್ದರು.

ಸದರಿ ಜಮೀನು ಮೀಸಲು ಅರಣ್ಯವಾಗಿದ್ದು, ಅರಣ್ಯ ಒತ್ತುವರಿ ಮಾಡಿ ಕಾಡು ಮರ, ಗಿಡಗಳನ್ನು ನಾಶಪಡಿಸಿ ತೆಂಗಿನ ತೋಟ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಅರಣ್ಯ ಇಲಾಖೆಯು ಭಾನುವಾರ ಬೆಳಿಗ್ಗೆ ಜೆಸಿಬಿಯೊಂದಿಗೆ ಸ್ಥಳಕ್ಕೆ ತೆರಳಿ ತೆರವು ಮಾಡಿ ಸ್ಥಳೀಯ ಪ್ರಬೇಧದ ಸಸಿಗಳನ್ನು ನೆಟ್ಟು ಅರಣ್ಯ ಇಲಾಖೆಯ ಫಲಕ ಹಾಕಿಲಾಯಿತು.

### ಎಚ್ಚರಿಕೆ ಗಂಟೆ

ಅರಣ್ಯ ಭೂಮಿಯನ್ನು ಮನಸೋ ಇಚ್ಛೆ ಒತ್ತುವರಿ ಮಾಡಿ ತೆಂಗು, ಕಾಫಿ ಮತ್ತು ಅಡಿಕೆ ತೋಟ ಮಾಡುತ್ತಿದ್ದವರಿಗೆ ಮಡಬ ಅರಣ್ಯ ತೆರವು ಎಚ್ಚರಿಕೆಯ ಗಂಟೆಯಾಗಿದೆ. ಇಂದಿನ ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಏಡುಕುಂಡಲು, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಮತ್ತಿತರರಿದ್ದರು.

### ಖಂಡ್ರೆ ಕ್ರಮಕ್ಕೆ ಗ್ರಾಮಸ್ಥರ ಮೆಚ್ಚುಗೆ

ಕೆಲವು ವರ್ಷಗಳಿಂದ ಜಿಲ್ಲೆಯಲ್ಲಿ ಶುಂಠಿ ಬೆಳೆಯುವ ಹೆಸರಲ್ಲಿ ಕೆಲವರು ನಕಲಿ ದಾಖಲೆ ಸೃಷ್ಟಿಸಿ ಅರಣ್ಯ ಭೂಮಿ ಕಬಳಿಸಿದ್ದು ಬೆಲೆ ಬಾಳುವ ಮರ ಕಡಿದು ನಂತರ ತೆಂಗು, ಬಾಳೆ ಹಾಗೂ ಅಡಿಕೆ ತೋಟ ಮಾಡುತ್ತಿದ್ದಾರೆ. ಕಂದಾಯ ಇಲಾಖೆಯ ಕೆಲವು ಅಧಿಕಾರಿಗಳು ಅರಣ್ಯ ಭೂಮಿಯನ್ನು ಅಕ್ರಮ ಮಂಜೂರಾತಿ ಮಾಡುತ್ತಿದ್ದಾರೆ ಎಂಬ ದೂರು ಸರ್ಕಾರಕ್ಕೆ ತಲುಪುತ್ತಿತ್ತು. ಆದರೆ ಯಾವುದೇ ಸಚಿವರು ಇತ್ತ ಗಮನ ಹರಿಸಲಿಲ್ಲ. ಆದರೆ ಈಶ್ವರ ಖಂಡ್ರೆ ಅವರು ಅರಣ್ಯ ಸಚಿವರಾದ ಮೇಲೆ ಇಂತಹ ಅಕ್ರಮಗಳಿಗೆ ಕಡಿವಾಣ ಬಿದ್ದಿದೆ ಎಂದು ಗ್ರಾಮಸ್ಥರು ತಿಳಿಸಿದ್ದು ಸಚಿವರ ಈ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಗಮನ ಸೆಳೆದ ಬೈಕ್-ಕಾರ್ ರೇಸ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಹಾನಬಾಳ್ ಸ್ಪೋರ್ಟ್ಸ್ ಅಸೋಸಿಯೇಷನ್ ವತಿಯಿಂದ ಹಾನುಬಾಳು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸೀಸನ್-1ರ ಬೈಕ್ ಹಾಗು ಕಾರ್ ರೇಸ್ ವೀಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸಿತು.

ಟು ಸ್ಟ್ರೋಕ್, ಟಿವಿಎಸ್ ಕ್ಲಾಸ್, ಟಿವಿಎಸ್ ಓಪನ್, ಸ್ಕೂಟರ್ ಕ್ಲಾಸ್, ಫೋರ್ ಸ್ಟ್ರೋಕ್, ಎಕ್ಸ್‌ಫರ್ಟ್ ಓಪನ್, ಕಿಟ್ ಕ್ಯಾಂ, ಹಾನಬಾಳ್ ಕ್ಲಾಸ್, ಇಂಡಿಯನ್ ಓಪನ್, ಫಾರೆನ್‌ಮೇಟ್, ಫಾರೆನ್ ಮೋಟ್ ಸೇರಿ ಹಲವು ವರ್ಗಗಳಲ್ಲಿ ಸ್ಪರ್ಧೆಗಳು ನಡೆದವು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ಯುವ ಜನತೆಗೆ ಈ ರೀತಿಯ ಕ್ರೀಡಾ ಕಾರ್ಯಕ್ರಮಗಳು ಶಕ್ತಿ, ಶಿಸ್ತು ಸಹಿತ ಆದರ್ಶ ನೀಡುತ್ತವೆ. ಗ್ರಾಮೀಣ ಮಟ್ಟದಲ್ಲಿ ನಡೆಯುವ ಈ ಕ್ರೀಡೋತ್ಸವ ನಗರಗಳಿಗೆ ತಲುಪುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು.

ಕ್ರೀಡೆ ಯುವಕರನ್ನು ದುಶ್ಚಟಗಳಿಂದ ದೂರ ಇಟ್ಟು ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಮುಖಂಡರಾದ ಹುರುಡಿ ಪ್ರಶಾಂತ, ಮುದ್ದ, ನುಯಾಜ್ ಹೀರಾ, ಮಸ್ತಾರೆ ಲೋಕೇಶ್, ವಿಕ್ರಂ ಹುರುಡಿ ಭಾಗವಹಿಸಿದ್ದರು.

## ವ್ಯಕ್ತಿ ಏಳಿಗೆಗೆ ಪ್ರಜಾಪ್ರಭುತ್ವ ವ್ಯವಸ್ಥೆ ಪೂರಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯಾವ ವ್ಯಕ್ತಿ ಯಾವ ಪದವಿಗೆ ಬೇಕಾದರೂ ಏರಬಹುದು ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಪಟ್ಟಣದ ಸರ್ಕಾರಿ ಕಾಲೇಜಿನಲ್ಲಿ ಐಕ್ಯುಎಸಿ ಮತ್ತು ಸಾಂಸ್ಕೃತಿಕ ವೇದಿಕೆ ವತಿಯಿಂದ 2024-25ನೇ ಶೈಕ್ಷಣಿಕ ಸಾಲಿನ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ತೃತೀಯ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಯಶಸ್ಸುಗೊಳಿಸುವ ಮೂಲಕ ಕಾಲೇಜು ಹಾಗೂ ಕ್ಷೇತ್ರದ ಘನತೆ ಹೆಚ್ಚಿಸಬೇಕು. ತಂದೆ-ತಾಯಿ ದುಡಿಮೆ, ಶ್ರಮ, ನಿಷ್ಠೆ, ತ್ಯಾಗ, ಆಕಾಂಕ್ಷೆಗಳು ಸದಾ ವಿದ್ಯಾರ್ಥಿಗಳ ಮನಸ್ಸಿನಲ್ಲಿರಬೇಕು.



ಉತ್ತಮ ಪ್ರಜೆಯಾಗಿ ದೇಶದ ಏಳಿಗೆಗೆ ಕೊಡುಗೆ ನೀಡಬೇಕೆಂದರು. ಹಾಸನ ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಸ್. ಮಂಜೇಗೌಡ ಮಾತನಾಡಿ, ಆಲೂರು ಪಾಳೇಗಾರರ ಆಳ್ವಿಕೆಗೆ ಒಳಪಟ್ಟ ಐತಿಹಾಸಿಕ ಪ್ರದೇಶವಾಗಿದ್ದು, ಇದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಹೆಮ್ಮೆ ಇರಬೇಕು. ನಮ್ಮ ಮೇಲೆ ತಂದೆ-ತಾಯಿಗಳು ಹಾಗೂ ಸಮಾಜದ ಋಣವಿದ್ದು, ಅವುಗಳ ಋಣಸಂದಾಯ ನಮ್ಮೆಲ್ಲರ ಜವಾಬ್ದಾರಿ ಎಂದರು. ಪ್ರಾಂಶುಪಾಲ ಟಿ. ಪಿ. ಪುಟ್ಟರಾಜು ಅಧ್ಯಕ್ಷತೆ ವಹಿಸಿದ್ದರು. ಎಂ. ಬಾಲಕೃಷ್ಣ, ಪ್ರಾಧ್ಯಾಪಕರಾದ ಕೆ.ಎನ್. ರಮೇಶ್, ಜೆ.ಜಿ. ನಟರಾಜು, ಅಧೀಕ್ಷಕ ರವಿಪ್ರಕಾಶ್, ಡಾ. ಪಿ.ಕೆ. ರಾಘವೇಂದ್ರ, ಎನ್‌ಎಸ್‌ಎಸ್ ಯೋಜನಾಧಿಕಾರಿ ಪುರುಷೋತ್ತಮ್, ಸಾಂಸ್ಕೃತಿಕ ವೇದಿಕೆ ಸಂಚಾಲಕ ವೆಂಕಟೇಶ್ ಇತರರಿದ್ದರು.

## ಹೊಂಗಡಹಳ್ಳ ಕೃಷಿ ಪತ್ತಿನ ಸಹಕಾರ ಸಂಘ ಬಿಜೆಪಿ ತೆಕ್ಕೆಗೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಹೆತ್ತೂರು ಹೋಬಳಿ ಹೊಂಗಡಹಳ್ಳ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಬಿಜೆಪಿ ಬೆಂಬಲಿತ ಹೆಚ್.ಡಿ. ಪ್ರಸನ್ನಕುಮಾರ್ ಅವಿರೋಧ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಹರ್ಷವರ್ಧನ್ ಆಯ್ಕೆಯಾಗಿದ್ದಾರೆ. ನೂತನ ಅಧ್ಯಕ್ಷ ಪ್ರಸನ್ನಕುಮಾರ್ ಮಾತನಾಡಿ, ರೈತರಿಗೆ ನೆರವು ನೀಡುವ ನಿಟ್ಟಿನಲ್ಲಿ ಶ್ರಮಿಸುತ್ತೇನೆ ಎಂದರು. ಚುನಾವಣಾ ಅಧಿಕಾರಿಯಾದ ಮಂಜುನಾಥ ಕಾರ್ಯ ನಿರ್ವಹಿಸಿದರು.

## ಸಮಾಜ ಸುಧಾರಕರು ಜಾತಿ ಸ್ವತ್ತಲ್ಲ: ಬರಗೂರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಾತಿ ಪದ್ಧತಿ ನಿರ್ಮೂಲನೆಗಾಗಿ ಹೋರಾಡಿದ ಮಹನೀಯರು ಯಾವುದೇ ಒಂದು ಜಾತಿಯ ಸ್ವತ್ತಲ್ಲ. ಅಂತಹ ಮಹನೀಯರನ್ನೇ ಜಾತಿ ಜೈಲಿನೊಳಗೆ ಕೂಡಿ ಹಾಕಿರುವ ಸಮಾಜ ನಮ್ಮದಾಗಿದೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರಾಜ್ಯ ಸರ್ಕಾರಿ ಎಸ್ಸಿ-ಎಸ್ಟಿ ನೌಕರರ ಸಮನ್ವಯ ಸಮಿತಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಮತ್ತು ನೌಕರರ ಸ್ವಾಭಿಮಾನ ಸಮಾವೇಶದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಶೋಷಿತ ಸಮುದಾಯಗಳ ಪರವಾಗಿ ಹೋರಾಟ ನಡೆಸಿದ, ಸಮಾನತೆಗಾಗಿ ಜೀವನಪೂರ್ತಿ ಹೋರಾಡಿದ ನಾಯಕರು ಇಂದು ಜಾತಿ ನಾಯಕರಾಗಿ ಬದಲಾಗಿದ್ದಾರೆ ಎಂದರು.

ಆತ್ಮಾಭಿಮಾನ ಹಾಗೂ ಆತ್ಮಾವಲೋಕನ ಈ ಎರಡು ಅಂಶಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಇಂದಿನ ಪೀಳಿಗೆ ಇದೆ. ಅದನ್ನು ಅರಿಯದೆ ಸಮಾಜ ಮುಂದಕ್ಕೆ ಸಾಗುತ್ತಿದೆ.

ಜಯಂತಿಗಳಿಗೆ ಜಾತಿ ಮಿತಿ ಬಂದಿರುವ ಕಾಲ ಇದಾಗಿದೆ. ಸರ್ಕಾರ ವರ್ಷದಲ್ಲಿ 30ಕ್ಕೂ ಹೆಚ್ಚು ಮಹನೀಯರ ಜಯಂತಿ ಮಾಡುತ್ತದೆ. ಖಾಸಗಿಯಾಗಿ ಅನೇಕ ಜಯಂತಿಗಳು ನಡೆಯುತ್ತವೆ. ಕಡೆ ಪಕ್ಷ ಸರ್ಕಾರ ಆಯೋಜಿಸುವ ಸಮಾರಂಭಗಳಲ್ಲಾದರೂ ಜಾತಿಯತೆ ದೂರಾಗಬೇಕು ಎಂದು ಸಲಹೆ ನೀಡಿದರು.



ಅಂಬೇಡ್ಕರ್, ಜಗಜೀವನ್ ರಾಮ್ ಪರಿಶಿಷ್ಟರ ಪ್ರತಿನಿಧಿ, ವಾಲ್ಮೀಕಿ ನಾಯಕರಿಗೆ ಸೇರಿದವನು, ಬಸವಣ್ಣ ಲಿಂಗಾಯತರ ಸ್ವತ್ತು, ಕುರುಬರಿಗೆ ಕನಕದಾಸ, ಕುಂಬಾರರಿಗೆ ಸರ್ವಜ್ಞ ಮೀಸಲು ಎಂಬ ವಾತಾವರಣ ನಿರ್ಮಾಣವಾಗಿದೆ.

ಡಾ. ಬಿ.ಆರ್. ಅಂಬೇಡ್ಕರ್ ಕೇವಲ ಪರಿಶಿಷ್ಟರಿಗೆ ಮಾತ್ರವಲ್ಲ ಎಲ್ಲರಿಗೂ ಸೇರಿದವರು. ಬಾಬಾ ಸಾಹೇಬರು ಸರ್ವ ಸಮಾಜದ ನಾಯಕ ಎಂಬ ಭಾವನೆ ಮೂಡಿದರೆ ಅದು ನಿಜವಾದ ಆತ್ಮಾಭಿಮಾನ ಎಂದು ಹೇಳಿದರು.

ಸಂವಿಧಾನದ ಪೀಠಿಕೆಯಲ್ಲಿ ಜಾತ್ಯಾತೀತತೆ, ಸಮಾಜವಾದ, ಸಮಾನತೆ, ಸಾರ್ವಭೌಮತ್ವದ ಬಗ್ಗೆ ಪ್ರತಿಪಾದಿಸಲಾಗಿದೆ. ಆದರೆ ನಿಜವಾಗಿಯೂ ಸಮಾಜದಲ್ಲಿ ಜಾತ್ಯಾತೀತರಾಗಿ ಜಾತ್ಯಾತೀತ ಸಮಾಜಕ್ಕಾಗಿ ಹೋರಾಟ ಮಾಡುವವರು ಇದ್ದಾರಾ ಎಂಬ ಪ್ರಶ್ನೆಗೆ ಉತ್ತರ ಇಲ್ಲ.

ಅಂಬೇಡ್ಕರ್ ಅವರು ಕೇವಲ ಮೀಸಲಾತಿ ಕಲ್ಪಿಸಿದರು ಎಂಬ ಮಾತ್ರಕ್ಕೆ ಆದರ್ಶರಾಗುವುದಿಲ್ಲ. ಅವರು ಮಾರ್ಕ್ಸ್‌ವಾದ, ಭಾರತೀಯ ಪುರಾಣ, ಸಾಮಾಜಿಕ ಸಂಪ್ರದಾಯ ಹೀಗೆ ಎಲ್ಲವನ್ನೂ ತಿಳಿದು ದೇಶವನ್ನು ಮರುಕಟ್ಟುವ ಕೆಲಸ ಮಾಡಿದರು. ಮಹಿಳೆಯರಿಗೆ, ಶೋಷಿತರಿಗೆ, ಬಡ ಸಮುದಾಯಗಳಿಗೆ ಸಮಾನತೆಯನ್ನು ತರುವಲ್ಲಿ ಶತಪ್ರಯತ್ನ ಮಾಡಿ ಸಂವಿಧಾನ ನೀಡಿದವರು. ಅವರ ಆದರ್ಶ ಮತ್ತು ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಅವರಂತೆ ಬದುಕಬೇಕು ಎಂದರು.

# ಕಾಂಗ್ರೆಸ್ ಯಾವತ್ತಿಗೂ ಪಾಕಿಸ್ತಾನ ಅನುಯಾಯಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಂಗ್ರೆಸ್ ಯಾವತ್ತೂ ಕೂಡ ಭಾರತದ ಪರವಾಗಿಲ್ಲ, ಅವರು ಪಾಕಿಸ್ತಾನದ ಪರವಾಗಿದ್ದಾರೆ. ಏಕೆಂದರೆ ಅದು ಅವರ ಸಂತತಿ, ದೇಶದ ಕಾಂಗ್ರೆಸ್ಸಿಗರು ಪಾಕ್‌ನ ಅನುಯಾಯಿಗಳು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.



ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿ, ನಮ್ಮ ದೇಶದವರಿಗೆ ಅನ್ಯಾಯ ಆಯ್ತು, ಆ ಹೆಣ್ಣುಮಕ್ಕಳಿಗೆ ನ್ಯಾಯ ಕೊಡಬೇಕಲ್ವಾ, ಆ ಕೆಲಸ ನಾವು ಮಾಡ್ತಾ ಇದ್ದೀವಿ, ಇದನ್ನು ವಿರೋಧ ಮಾಡುವ ಕಾಂಗ್ರೆಸ್‌ನ ಮನಸ್ಥಿತಿ ಏನು ಅನ್ನೋದನ್ನ ಜನರು ಯೋಚನೆ ಮಾಡುತ್ತಾರೆ ಎಂದು ಕುಟುಕಿದರು.

ಭಾರತೀಯ ಸೇನೆಯ ಬಗ್ಗೆ, ಕೇಂದ್ರ ಸರ್ಕಾರದ ಬಗ್ಗೆ ಲಘುವಾಗಿ ಮಾತನಾಡುತ್ತಿರುವ ಕಾಂಗ್ರೆಸ್‌ನವರ ಜನ್ಮವೇ ಅಂತಹದ್ದು ಎಂದು ವಾಗ್ದಾಳಿ ನಡೆಸಿದರು.

ಶಾಸಕ ಕೊತ್ತೂರು ಮಂಜುನಾಥ್ ಒಬ್ಬರೇ, ಅಲ್ಲ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಕೃಷ್ಣ ಭೈರೇಗೌಡ, ಸಂತೋಷ್ ಲಾಡ್ ಸಹ ಮಾತನಾಡಿದ್ದಾರೆ. ಕಾಂಗ್ರೆಸ್‌ನವರ ಜನ್ಮವೇ ಅಂತಹದ್ದು ಎಂದು ಕಿಡಿಕಾರಿದರು.

ಕಾಂಗ್ರೆಸ್ ದೊಡ್ಡ ನಾಯಕರು ಹೇಳ್ತಾರೆ ನಾವು ಸತ್ತಂಗೆ ಮಾಡ್ತೀವಿ, ಸೆಕೆಂಡ್ ಲೈನ್ ಲೀಡರ್‌ಗಳು ಅತ್ತಂಗೆ ಮಾಡಿ ಅಂತಾರೆ. ಇದೇ ಅವರ ದ್ವಂದ್ವ ನೀತಿ ಎಂದರು.

26 ಜನರನ್ನ ಧರ್ಮ ಕೇಳಿ ಹೊಡೆದವರು ನಮ್ಮ ದೇಶದವರ, ಅವರು ಉಗ್ರವಾದಿಗಳು, ಉಗ್ರರನ್ನು ಹುಡುಕಿ ಹೊಡೀತೀವಿ ಅಂತ ಮೋದಿ ಹೇಳಿದರು. ಪಾಕಿಸ್ತಾನದವರು ನಮಗೆ ಸಂಬಂಧ ಇಲ್ಲ ಅಂದ್ರು, ಮೊನ್ನೆ ಏಕೆ ಒಪ್ಪಿಕೊಂಡರು, ನಮ್ಮಲ್ಲಿ ನಡೆಯುವ ಭಯೋತ್ಪಾದನಾ ಚಟುವಟಿಕೆಗಳಿಗೆ ಪಾಕಿಸ್ತಾನ ಕಾರಣ ಎಂಬುದು ಸಾಬೀತಾಗಿದೆ. ಅವರು ನಮ್ಮ ಮೇಲೆ ಯುದ್ಧ ಮಾಡಲು ಬಂದ್ರು, ಅದಕ್ಕೆ ಪಾಕ್‌ನ 9 ಸ್ಥಳಗಳಿಗೆ ನುಗ್ಗಿ ಹೊಡೆಯುವ ಕೆಲಸ ಮೋದಿ ಮಾಡಿದ್ರು ಎಂದರು.

ಮುಖ್ಯಮಂತ್ರಿಗಳು ಯುದ್ಧ ಬೇಡ ಅಂದ್ರು, ಕೆಲವರು ಬೆಂಬಲ ಕೊಡ್ತೀವಿ ಅಂದ್ರು, ಸಿಎಂ ಹೇಳಿಕೆಯನ್ನು ಯಾರು ವಿರೋಧಿಸಿದ್ರು ಎಂದು ಪ್ರಶ್ನಿಸಿದರು.

ಆಪರೇಷನ್ ಸಿಂಧೂರವನ್ನು ವಿರೋಧ ಮಾಡುವುದಾದರೆ ನಿಮ್ಮ ಸಿಂಧೂರಕ್ಕೂ ಸಂಚಕಾರ ಬರಬಹುದು. ಕಾಂಗ್ರೆಸ್ ಸಿಂದೂರಕ್ಕೆ ಸಂಚಾಕಾರ ಬರಬಹುದು ಎಚ್ಚರಿಕೆಯಿಂದ ಇರಿ, ಅಪಸ್ವರ ತೆಗೆಯುವುದನ್ನು ಬಿಡಿ. ಪಾಕಿಸ್ತಾನ ಕೇಳುವ ಪ್ರಶ್ನೆಯನ್ನೇ ಕಾಂಗ್ರೆಸ್ ಕೇಳ್ತಾ ಇದೆ, ಕಾಂಗ್ರೆಸ್ ಈಸ್ ಎ, ಬಿ ಟೀಂ ಆಫ್ ಪಾಕಿಸ್ತಾನ ಎಂದು ಜರಿದರು.

ಪಾಕಿಸ್ತಾನ ಒಂದು ಕಡೆ ಇದ್ದರೆ ಅದರ ಮೈಂಡ್ ಸೆಟ್ ಇಲ್ಲಿದೆ. ಪಾಪ ಮಹಾತ್ಮಗಾಂಧಿ ಅವರಿಗೆ ಗೊತ್ತಿರಲಿಲ್ಲ. ಎಲ್ಲಾ ಭಯೋತ್ಪಾದಕರನ್ನು ಪಾಕಿಸ್ತಾನಕ್ಕೆ ಕಳಿಸಿದರು. ಅವರ ಅನುಯಾಯಿಗಳನ್ನು ಇಲ್ಲಿ ಬಿಟ್ಟಿದ್ದಾರೆ ಎಂದು ಲೇವಡಿ ಮಾಡಿದರು.

ಕಾಶ್ಮೀರದಲ್ಲಿ ಗೊಂದಲ ಹುಟ್ಟಿ ಹಾಕಿದ್ದು ಕಾಂಗ್ರೆಸ್, ಪಾಕಿಸ್ತಾನದಲ್ಲೂ ಗೊಂದಲ ಹುಟ್ಟಿ ಹಾಕಿದ್ದು ಕಾಂಗ್ರೆಸ್, ಪಿಓಕೆ ಹುಟ್ಟಿ ಹಾಕಿದ್ದು ಕಾಂಗ್ರೆಸ್, ಇಂದಿರಾಗಾಂಧಿ ಅವರನ್ನು ಬಹಳ ಹೊಗಳುತ್ತಾರೆ, 1971 ರಲ್ಲಿ ನಮ್ಮ ಮೇಲೆ ಯಾರೂ ಯುದ್ಧಕ್ಕೆ ಬಂದಿರಲಿಲ್ಲ. ಪಾಕಿಸ್ತಾನ-ಬಾಂಗ್ಲಾದೇಶದ ನಡುವೆ ಯುದ್ಧ ನಡೆಯುತ್ತಿತ್ತು. ಒಬ್ಬನೇ ವೈರಿ ಇದ್ದವನನ್ನು ಇಬ್ಬರು ಮಾಡಿ ನಮ್ಮ ಮೇಲೆ ಬಿಟ್ಟಿದ್ದೀರಿ. ಇದು ಕಾಂಗ್ರೆಸ್ ಮಾಡಿರುವ ದ್ರೋಹ ಎಂದರು.

ಈಗೇನು ಹೊರಗಡೆ ಕಾರ್ಯಾಚರಣೆ ಆಗುತ್ತಿದೆಯೋ, ಅದು ಒಳಗೂ ಆಗುತ್ತೆ, ಅದಕ್ಕೆ ಸ್ವಲ್ಪ ಸಮಯ ಆಗುತ್ತೆ. ಹೊರಗಡೆ ಕಳ್ಳಂಗೆ ಬೇಲಿ ಹಾಕಿದರೆ ಅವನು ಬರಲ್ಲ ಅಂದರೆ ಒಳಗಿರುವವನು ಸುಲಭವಾಗಿ ಸಿಕ್ತಾನೆ, ಆ ಕಾರ್ಯಾಚರಣೆಯೂ ನಡೆಯುತ್ತದೆ ಎಂದರು.

# ಹಟ್ಟಿ ಮಾರಮ್ಮ ದೇಗುಲ ನಿರ್ಮಾಣಕ್ಕೆ 1.50 ಲಕ್ಷ ರೂ.

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಶ್ರೀ ಹಟ್ಟಿ ಮಾರಮ್ಮ ದೇವಿಯ ನೂತನ ದೇವಾಲಯ ನಿರ್ಮಾಣಕ್ಕೆ ಶಾಸಕ ಸಿ.ಎನ್. ಬಾಲಕೃಷ್ಣ 1.50 ಲಕ್ಷ ರೂ. ಅನುದಾನ ನೀಡಿದ್ದಾರೆ ಎಂದು ಕೃಷಿ ಪತ್ತಿನ ನಿರ್ದೇಶಕ ತೋಟಿ ನಾಗರಾಜ್ ಹೇಳಿದರು.

ತಾಲ್ಲೂಕಿನ ಹೊನ್ನಮಾರನಹಳ್ಳಿ ಗ್ರಾಮದಲ್ಲಿ ಶ್ರೀ ಹಟ್ಟಿ ಮಾರಮ್ಮ ದೇವಾಲಯದ ಸಮಿತಿ ಸದಸ್ಯರಿಗೆ ಹಣ ಹಸ್ತಾಂತರಿಸಿ ಮಾತನಾಡಿ, ದೇವಾಲಯ ನಿರ್ಮಾಣಕ್ಕೆ ಶಾಸಕ ಸಿ.ಎನ್. ಬಾಲಕೃಷ್ಣ ಅವರು ವೈಯಕ್ತಿಕವಾಗಿ ಈಗಾಗಲೇ 75 ಸಾವಿರ ರೂ. ನೀಡಿದ್ದಾರೆ. ಜೊತೆಗೆ ಈಗ ಸರ್ಕಾರದಿಂದ 1.50 ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಿಸಿದ್ದಾರೆ ಎಂದರು. ಗ್ರಾಮಸ್ಥರ ಒತ್ತಾಯದಂತೆ ಶ್ರೀ ಮಹಾಲಿಂಗೇಶ್ವರ ಸ್ವಾಮಿ ದೇವಾಲಯದಿಂದ ಪುರಾಣ ಪ್ರಸಿದ್ಧ ಮಾಸ್ತಿಯಮ್ಮ ದೇವಾಲಯದ ಹೊರಗಿನ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಜೊತೆಗೆ 52 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದ ವಿವಿಧ ಬಡಾವಣೆಗಳ ಕಾಂಕ್ರೀಟ್ ರಸ್ತೆ, ಒಳಚರಂಡಿ ನಿರ್ಮಾಣಕ್ಕೆ ಶಾಸಕರು ಅನುದಾನ ನೀಡಿದ್ದಾರೆ ಎಂದರು.

ಸಮುದಾಯ ಭವನ ನಿರ್ಮಾಣ ಮತ್ತು ಒಂಟಿ ಮಾವಿನಹಳ್ಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಾಲಯ ನಿರ್ಮಾಣಕ್ಕೆ ಹೆಚ್ಚಿನ ಅನುದಾನ ಸೇರಿ ಭಾಗದ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಸಹಕಾರ ನೀಡುತ್ತಾ ಬಂದಿದ್ದಾರೆ. ಮುಂಬರುವ ದಿನಗಳಲ್ಲೂ ಶಾಸಕರು ಈ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡಲಿದ್ದಾರೆ ಎಂದರು. ದೇವಾಲಯ ಸಮಿತಿ ಸದಸ್ಯ ದೊಡ್ಡಯ್ಯ ಮಾತನಾಡಿ, ಗ್ರಾಮದ ಪರಿಶಿಷ್ಟ ಜಾತಿ ಬಡಾವಣೆಯಲ್ಲಿ ನಿರ್ಮಾಣವಾಗುತ್ತಿರುವ ಹಟ್ಟಿ ಮಾರಮ್ಮ ದೇವಾಲಯ ನಿರ್ಮಾಣಕ್ಕೆ ಶಾಸಕರು ಸಹಕಾರ ನೀಡಿದ್ದಾರೆ ಎಂದು ತಿಳಿಸಿದರು.

ನುಗ್ಗೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವಿಠ್ಠಲ್ ಕುಮಾರ್, ಮುಖಂಡ ಮಾಸ್ತಿ ಗೌಡ, ದೇವಾಲಯ ಸಮಿತಿ ಸದಸ್ಯರಾದ ಕೃಷ್ಣಮೂರ್ತಿ, ದೊಡ್ಡಯ್ಯ, ಸುನಿಲ್, ಶೃತಿ, ಶರತ್, ಮೂರ್ತಿ, ಮಂಜು, ಶಶಿಧರ್ ಹಾಜರಿದ್ದರು.

# ಹಾಲಿನ ಹೆಚ್ಚಳ ಲಾಭ ರೈತರಿಗೆ: ಸಚಿವ ವೆಂಕಟೇಶ್

## ಹಾಮೂಲ್‌ಗೆ ಭೇಟಿ, ಪರಿಶೀಲನೆ | ಕೆಎಂಶಿ, ಸಂಸದರ ಸಾಥ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಾಲಿನ ದರವನ್ನು ಎರಡು ಬಾರಿ ಹೆಚ್ಚಳ ಮಾಡಿದ್ದು ಅದರ ಲಾಭವನ್ನು ರೈತರಿಗೆ ನೀಡಲಾಗಿದೆ ಎಂದು ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ. ವೆಂಕಟೇಶ್ ಹೇಳಿದರು.



ನಗರದ ಹಾಸನ ಹಾಲು ಒಕ್ಕೂಟ ಮಂಡಳಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಿನ ದರ ಹೆಚ್ಚಳದಿಂದ ಒಕ್ಕೂಟಗಳಿಗೆ ನಷ್ಟವಾಗುತ್ತದೆ ಎನ್ನುವುದೆಲ್ಲ ಸುಳ್ಳು. ಹಾಲು ಉತ್ಪಾದಕರಿಗೆ ಹೆಚ್ಚುವರಿ ಹಣ ನೀಡುತ್ತಿರುವುದರಿಂದ ಲಾಭ ನಷ್ಟದ ಪ್ರಶ್ನೆ ಬರುವುದಿಲ್ಲ. ಸಂಗ್ರಹವಾಗುವ ಎಲ್ಲಾ ಹಾಲು ಮಾರಾಟವಾಗದೆ ಉಳಿದರೆ ಅದಕ್ಕೆ ಸರ್ಕಾರ ಹೊಣೆಯಾಗಲು ಸಾಧ್ಯವಿಲ್ಲ. ಉಪ ಉತ್ಪನ್ನ ತಯಾರಿಕೆ ಮೂಲಕ ಲಾಭ ಮಾಡಿಕೊಳ್ಳಬೇಕು. ಕೇವಲ ಹಾಲು ಮಾರಾಟವಷ್ಟೇ ಮಾಡುತ್ತೇವೆ ಎಂದರೆ ಅದು ಸಾಧ್ಯವಾಗುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಶು ಸಂಗೋಪನೆ ಇಲಾಖೆಯಲ್ಲಿ ಹೊರಗುತ್ತಿಗೆ ನೌಕರರ ಸಂಖ್ಯೆ ಹೆಚ್ಚಾಗಿ ಸರ್ಕಾರಕ್ಕೆ ದುಬಾರಿಯಾಗುತ್ತಿದ್ದು ಹೆಚ್ಚುವರಿ ನೌಕರರ ಕೈ ಬಿಡಲು ಚಿಂತನೆ ನಡೆದಿದೆ. ಇತ್ತೀಚೆಗಷ್ಟೇ ಅಧಿಕಾರಿಗಳ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊರಗುತ್ತಿಗೆ ನೌಕರರ ನೀಡುತ್ತಿರುವ ವೇತನ ದುಬಾರಿಯಾಗುತ್ತಿದೆ. ನೌಕರರ ಸಂಖ್ಯೆ ಕಡಿಮೆ ಮಾಡಿ ಎಂದು ಸೂಚಿಸಿದ್ದಾರೆ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ ಎಂದು ತಿಳಿಸಿದರು.

ಪ್ರತಿ ಲೀಟರ್ ಹಾಲಿಗೆ 4 ರೂ. ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಈ ಹಿಂದಿನ ಬಿಜೆಪಿ ಸರ್ಕಾರ 700 ಕೋಟಿ ರೂ. ಪ್ರೋತ್ಸಾಹ ಧನ ನೀಡದೆ ಸಮಸ್ಯೆಯಾಗಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬಾಕಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಈ ವರ್ಷ ಏಪ್ರಿಲ್, ಮೇ ತಿಂಗಳ ಪ್ರೋತ್ಸಾಹ ಧನ ಮಾತ್ರ ಬಾಕಿಯಿದ್ದು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಿದರು.

ನನಗೆ ಮಾಹಿತಿ ಇಲ್ಲ: ಸಂಪುಟ ವಿಸ್ತರಣೆ ಬಗ್ಗೆ ನನಗೆ ಯಾವ ಮಾಹಿತಿಯೂ ಇಲ್ಲ. ಸಚಿವರಾಗಬೇಕೆಂಬ ಆಸೆ ಶಾಸಕರಿಗೆ ಇರುತ್ತದೆ. ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರಿಗೂ ಸಚಿವರಾಗುವ ಆಸೆಯಿದೆ. ಎಲ್ಲರಿಗೂ ಅವಕಾಶ ಸಿಗಲಿ ಎಂದು ಪ್ರತಿಕ್ರಿಯಿಸಿದರು.

ಜಿಲ್ಲಾ ಪ್ರವಾಸ ಕೈಗೊಂಡಿದ್ದ ಸಚಿವ ಕೆ.ವೆಂಕಟೇಶ್ ಅವರು ಹಾಮೂಲ್‌ನ ವಿವಿಧ ಪ್ಲಾಂಟ್‌ಗಳ ವೀಕ್ಷಿಸಿದರು ಮಾತ್ರವಲ್ಲದೆ ಪಶು ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿದರು. ಸಚಿವರಿಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಸಾಥ್ ನೀಡಿದರು.

ಹಾಮೂಲ್‌ನಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಹಾಲು ಉತ್ಪಾದಕರಿಗೆ ಸಮಯಕ್ಕೆ ಸರಿಯಾಗಿ ಬಿಲ್ ಪಾವತಿ ಸೇರಿ ಸರ್ಕಾರದ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸಬೇಕು ಎಂದು ತಿಳಿಸಿದರು.

ಹಾಲಿನ ಉತ್ಪಾದನೆ ಹೆಚ್ಚಾಗುವುದರಿಂದ ಒಕ್ಕೂಟಗಳಿಗೆ ನಿರ್ವಹಣೆ ಸಮಸ್ಯೆಯಾಗಬಾರದು. ಬೆಂಗಳೂರು ಸೇರಿ ಇತರ ನಗರಗಳಲ್ಲಿ ಕೆಎಂಎಫ್ ಹಾಲು ಮಾರಾಟಕ್ಕೆ ಅವಕಾಶ ಮಾಡುವ ಕುರಿತು ಮುಂದಿನ ದಿನಗಳಲ್ಲಿ ಚರ್ಚೆ ನಡೆಸಲಾಗುವುದು. ಉಪ ಉತ್ಪನ್ನ ತಯಾರಿಕೆ ಮೂಲಕ ಉತ್ಪಾದಕರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಬೇಕು ಎಂದರು.



ಹಾಮೂಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಮಾತನಾಡಿ, ಹಾಸನ ಹಾಲು ಒಕ್ಕೂಟದಲ್ಲಿ ನಿತ್ಯ 14 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು 2.50 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದೆ. ಮೊಸರು, ಬೆಣ್ಣೆ, ಐಸ್‌ಕ್ರಿಂ, ಪೆಟ್ ಬಾಟಲ್ ಮತ್ತಿತರ ಉಪ ಉತ್ಪನ್ನ ತಯಾರಿಕೆಗೆ 2 ಲಕ್ಷ ಲೀಟರ್ ವಿನಿಯೋಗವಾಗುತ್ತದೆ. ಅರ್ಧದಷ್ಟು ಹಾಲು ಉಳಿಯುತ್ತಿರುವುದರಿಂದ ಪೌಡರ್ ಮಾಡಲಾಗುತ್ತದೆ. ಹಾಲು ಮಾರಾಟದ ವ್ಯಾಪ್ತಿ ವಿಸ್ತರಿಸಿದರೆ ಅನುಕೂಲವಾಗುತ್ತದೆ ಎಂದರು.

ಹಾಮೂಲ್‌ಗೆ ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಸೇರಿ 22 ತಾಲ್ಲೂಕುಗಳಿಂದ ಹಾಲು ಸಂಗ್ರಹವಾಗುತ್ತದೆ. 3363 ಗ್ರಾಮಗಳು ಒಕ್ಕೂಟ ವ್ಯಾಪ್ತಿಗೆ ಸೇರಿವೆ. 1716 ಸಂಘಗಳು ಕಾರ್ಯನಿರ್ವಹಿಸುತ್ತಿವೆ. 12,2813 ಮಹಿಳಾ ಸದಸ್ಯರಿದ್ದಾರೆ ಎಂದು ಮಾಹಿತಿ ನೀಡಿದರು.

ಹಾಮೂಲ್ ಲಾಭದಾಯಕ ಸಂಸ್ಥೆ ಅಲ್ಲ. ಬರುವ ಆದಾಯವನ್ನು ಹಾಲು ಉತ್ಪಾದಕರಿಗೆ ಹಂಚಿಕೆ ಮಾಡುವುದರಿಂದ ಖಾತೆಯಲ್ಲಿ ಹಣ ಇರುವುದಿಲ್ಲ. ಸಾಕಷ್ಟು ಸವಾಲುಗಳ ನಡುವೆ 2.50 ಕೋಟಿ ರೂ. ಲಾಭದ ಹಣವಿದೆ ಎಂದು ತಿಳಿಸಿದರು.

ಹಾಮೂಲ್‌ನಲ್ಲಿ ಒಟ್ಟು 710 ಮಂಜೂರಾದ ಹುದ್ದೆಗಳಿದ್ದು 277 ಹುದ್ದೆಗಳು ಭರ್ತಿಯಾಗಿವೆ. 580 ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ. ತಿಂಗಳಿಗೆ 1.69 ಕೋಟಿ ರೂ. ನೌಕರರ ವೇತನಕ್ಕೆ ಖರ್ಚಾಗುತ್ತಿದೆ ಎಂದು ತಿಳಿಸಿದರು.

# ಗೌರಮ್ಮ ದರ್ಶನದಿಂದ ಪಾಪ ವಿಮೋಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಮೂಗುತಿ ಸುಂದರಿ ಮಾಡಾಳು ಗೌರಮ್ಮನ ದರ್ಶನ ಭಾಗ್ಯದಿಂದಲೇ ಜನ್ಮ ಜನ್ಮದ ಪಾಪ ವಿಮೋಚನೆ ಜೊತೆಗೆ ಮೋಕ್ಷ ಸಿಗಲಿದೆ ಎಂದು ಹಾರನಹಳ್ಳಿ ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.



ತಾಲ್ಲೂಕಿನ ಮಾಡಾಳು ಗ್ರಾಮದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಮಾಡಾಳು ಗೌರಮ್ಮ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ, ಲಿಂಗೈಕ್ಯ ಶಿವಲಿಂಗಜ್ಜಯ್ಯ ಅವರ 138ನೇ ಸಂಸ್ಮರಣೋತ್ಸವ ಹಾಗೂ ಧಾರ್ಮಿಕ ಸಮಾರಂಭದ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಮಾಡಾಳು ಗೌರಮ್ಮ ತನ್ನ ಮಹಿಮೆ, ಪವಾಡದಿಂದಲೇ ನಾಡಿನಾದ್ಯಂತ ಅಪಾರ ಭಕ್ತ ವೃಂದ ಹೊಂದಿದ್ದು, ಇದೀಗ ತಾಯಿಯ ಹೆಸರಿನಲ್ಲಿ ಶ್ರೀ ಮಠದಿಂದ ನಿರ್ಮಿಸುತ್ತಿರುವ ದೇವಾಲಯ ಸಹ ಮುಂದಿನ ದಿನಗಳಲ್ಲಿ ಶಕ್ತಿಪೀಠವಾಗಿ ಹೆಸರುವಾಸಿಯಾಗಲಿದೆ ಎಂದು ಭವಿಷ್ಯ ನುಡಿದರು.

ಶಿವಲಿಂಗಜ್ಜಯ್ಯ ಅವರು ನೂರು ಕೋಟಿ ಜಪಮಾಡಿ ಮೂಗುತಿ ಸಿದ್ಧಿಸಿಕೊಂಡು ಮಾಡಾಳು ಗೌರಮ್ಮನಿಗೆ ತೊಡಿಸಿದ್ದರು.

ಮಾಡಾಳು ಗೌರಮ್ಮ ಮೂಗುತಿ ಗೌರಮ್ಮ ಎಂದೇ ಪ್ರಸಿದ್ಧಿಯಾಗಿದ್ದು, ಈ ದೇವಿಯ ಮೂಗುತಿ ದರ್ಶನ ಭಾಗ್ಯದಿಂದಲೇ ಮುಕ್ತಿ ದೊರೆಯುತ್ತದೆ ಎಂದು ಸ್ವಾಮೀಜಿ ಹೇಳಿದರು.

ಬೆಕ್ಕಿನ ಕಲ್ಮಠದ ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿ, ದೇಶಾದ್ಯಂತ ಹಲವು ದೇವಿಯರ ಪ್ರಸಿದ್ಧ ಶಕ್ತಿ ಕ್ಷೇತ್ರ ಇರುವಂತೆಯೇ ಮಾಡಾಳು ಗೌರಮ್ಮ ದೇವಿಯ ಕ್ಷೇತ್ರವೂ ಮುಂದಿನ ದಿನಮಾನಗಳಲ್ಲಿ ನಾಡಿನ ಜನತೆಯ ಆರಾಧ್ಯ ದೈವ ಆಗಲಿದೆ. ಕೋಡಿಮಠದ ಶಕ್ತಿಯೂ ಇಲ್ಲಿ ಸಮ್ಮಿಲನ ಆಗಿರುವುದರಿಂದ ಇದರ ಕೀರ್ತಿ ನಾಡಿನ ಉದ್ದಗಲಕ್ಕೂ ಬೆಳಗುವುದರಲ್ಲಿ ಸಂದೇಹ ಇಲ್ಲ ಎಂದರು.

ಮನುಷ್ಯ ಹಣ, ಅಧಿಕಾರದ ಆಸೆಯ ಹಿಂದೆ ಓಡದೆ, ಸತ್ಯ ಧರ್ಮ, ಪ್ರಾಮಾಣಿಕತೆಯಿಂದ ನಡೆದುಕೊಳ್ಳುವ ಮೂಲಕ ಬಸವಣ್ಣ ಹೇಳಿದಂತೆ ಕಾಯಕದಲ್ಲಿ ಕೈಲಾಸ ಕಂಡಿದ್ದೇ ಆದರೆ, ಅಂತಹ ಮನುಷ್ಯನ ಬದುಕು, ಜನ ಮಾತ್ರವಲ್ಲ, ಜನಾರ್ಧನನೂ ಮೆಚ್ಚುವಂತಿರುತ್ತದೆ ಎಂದು ಕಿವಿಮಾತು ಹೇಳಿದರು.

ಹಿರಿಯ ನಟ ಎಸ್.ದೊಡ್ಡಣ್ಣ ಮಾತನಾಡಿ, ಶಿವ ನಾದಪ್ರಿಯನೂ ಅಲ್ಲ, ವೇದ ಪ್ರಿಯನೂ ಅಲ್ಲ, ಅವನು ಭಕ್ತಿ ಪ್ರಿಯ. ಅವನನ್ನು ಒಲಿಸಿಕೊಳ್ಳಲು ಶ್ರದ್ಧಾ ಭಕ್ತಿಯಿಂದ ಮಾತ್ರ ಸಾಧ್ಯ. ಹರಿಹರರೂ ಸಹ, ಬದಲಿಸಲಾಗದ ಹಣೆ ಬರಹವನ್ನು ಹಣೆಯ ಮೇಲೆ ವಿಭೂತಿ ಧರಿಸುವುದರಿಂದ ಹಣೆ ಬರಹ ಬದಲಿಸುವ ಶಕ್ತಿ ಇದೆ. ಆದರಿಂದ ಹಣೆಯ ಮೇಲೆ ವಿಭೂತಿ ಧರಿಸುವುದನ್ನು ಮಕ್ಕಳಿರಲಿ, ದೊಡ್ಡವರಲ್ಲೂ ಕಾಣದಿರುವುದು ವಿಷಾದನೀಯ.

ವಿಭೂತಿಗಟ್ಟಿ ಹಣೆ ಮೇಲೆ ಬಳಿಯುವ ಸಂಪ್ರದಾಯವನ್ನು ಮಾತೆಯರು ಪಾಲಿಸಿ, ತಮ್ಮ ಮಕ್ಕಳಿಗೂ ಹೇಳಿಕೊಡಬೇಕೆಂದು ಕರೆ ನೀಡಿದರು.

ಈ ವೇಳೆ ಕೋಡಿಮಠದ ಉತ್ತರಾಧಿಕಾರಿ ಚೇತನ್ ಮರಿದೇವರು, ಮಾಡಾಳು ವಿರಕ್ತ ಮಠದ ರುದ್ರಮುನಿ ಸ್ವಾಮೀಜಿ, ಕೋಳಗುಂದ ಕೇದಿಗೆ ಮಠದ ಜಯಚಂದ್ರಶೇಖರ ಸ್ವಾಮೀಜಿ, ಕೆ.ಬಿದಿರೆ ದೊಡ್ಡಮಠದ ಪ್ರಭುಕುಮಾರ ಶಿವಾಚಾರ್ಯ ಸ್ವಾಮೀಜಿ, ಮೂರು ಕಳಶ ಮಠದ ಜ್ಞಾನಪ್ರಭು ಸಿದ್ಧರಾಮ ದೇಶಿಕೇಂದ್ರ ಸ್ವಾಮೀಜಿ, ದೊಡ್ಡಮೇಟಿಕುರ್ಕೆ ವಿರಕ್ತ ಮಠದ ಶಶಿಶೇಖರ್ ಸ್ವಾಮೀಜಿ, ಕುಪ್ಪೂರು ಗದ್ದಿಗೆ ಮಠದ ತೇಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಹೊನ್ನವಳ್ಳಿ ಕರಿಸಿದ್ದೇಶ್ವರ ಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ದೊಡ್ಡಗುಣಿ ಹಿರೇಮಠದ ರೇವಣ ಸಿದ್ದೇಶ್ವರ ಸ್ವಾಮೀಜಿ ಇದ್ದರು.

ಇದಕ್ಕೂ ಮುನ್ನ ದೇವಾಲಯ ಆವರಣದಲ್ಲಿ ಶಿವಲಿಂಗಜ್ಜಯ್ಯ ಸ್ವಾಮೀಜಿ ಅವರ ಭಾವಚಿತ್ರವನ್ನು ವ್ರತ ಮಂಟಪದಲ್ಲಿ ಸ್ಥಾಪಿಸಿ ರಥೋತ್ಸವ ನೆರವೇರಿತು. ಶ್ರೀ ಮಠದ ಭಕ್ತರು ಹಾಗೂ ಮಾಡಾಳು, ಸುತ್ತಮುತ್ತಲ ಸಾವಿರಾರು ಮಂದಿ ಭಾಗಿಯಾಗಿದ್ದರು.

# ದೇಶ ಕಂಡ ಅಪರೂಪದ ರಾಜಕಾರಣಿ ಹೆಚ್‌ಡಿಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರೈತ ಪರವಾಗಿ ಸದಾ ಚಿಂತಿಸುವ ತಾಯಿ ಹೃದಯಿ, ರಾಜ್ಯ ರಾಜಕೀಯದ ಗುರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕರ್ನಾಟಕ ಹಾಗು ದೇಶಕಂಡ ಅಪರೂಪದ ರಾಜಕಾರಣಿ ಎಂದರು.



ನಗರದ ಶ್ರೀ ನೀಲುಬಾಗಿಲು ಆಂಜನೇಯ ಸ್ವಾಮಿ ದೇವಾಲಯದಲ್ಲಿ ಭಾನುವಾರ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ 93ನೇ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.

ದೇವೇಗೌಡರು ಅಪ್ಪಟ ಗ್ರಾಮೀಣ ಪರಿಸರದಿಂದ ಬೆಳೆದು ಬಂದ ರೈತನ ಮಗ. ಸರಳತೆಯ ಸಾಕಾರಮೂರ್ತಿ ಎನಿಸಿಕೊಂಡು, ಬದ್ಧತೆ, ಹಠ ಮತ್ತು ಛಲಗಾರಿಕೆಯಿಂದ ರಾಜಕೀಯ ಉತ್ತುಂಗಕ್ಕೇರಿದ ಮಹಾನಾಯಕರು ಎಂದು ಬಣ್ಣಿಸಿದರು.

ರೈತ ಕುಟುಂಬದ ಕೂಸಾಗಿ, ಹೊಲ ಗದ್ದೆಗಳಲ್ಲಿ ಕೆಲಸ ಮಾಡಿ, ಭೂಮಿ ತಾಯಿಯ ಬಂಧುವಾಗಿ ಬೆಳೆದ ಗೌಡರು 1960ರ ದಶಕದಲ್ಲಿಯೇ ಹೊಳೆನರಸೀಪುರದಲ್ಲಿ ಅಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಜನಪ್ರತಿನಿಧಿಯಾದವರು ಎಂದರು.

1962ರಲ್ಲಿ ರಾಜ್ಯ ರಾಜಕಾರಣಕ್ಕೆ ಅವರ ಪ್ರವೇಶ ಒಂದು ರೀತಿಯ ಮಿಂಚಿನ ಸಂಚಾರ. ವಿಧಾನ ಸಭೆಯ ಸದಸ್ಯರಾಗಿ ಅಂದಿನಿಂದ ಇಲ್ಲಿವರೆಗೆ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಗಂಭೀರ ಅಧ್ಯಯನ, ಮಾತುಗಾರಿಕೆ ಮೂಲಕ ಅವರು ತಮ್ಮದೇ ಹೆಜ್ಜೆ ಗುರುತು ಮೂಡಿಸುತ್ತಾ ರಾಜ್ಯ, ದೇಶದ ಎಲ್ಲಾ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ ಎಂದರು.

ಬರೋಬ್ಬರಿ 60 ವರ್ಷಗಳ ಅವರ ಒಟ್ಟಾರೆ ರಾಜಕೀಯ ಜೀವನ, ಶಾಸಕರಾಗಿ, ಸಚಿವರಾಗಿ, ವಿಪಕ್ಷ ನಾಯಕನಾಗಿ, ಮುಖ್ಯಮಂತ್ರಿಯಾಗಿ, ದೇಶದ ಪ್ರಧಾನಿಯಾಗಿ ಅವರು ಸಲ್ಲಿಸಿರುವ ಸೇವೆ ಅಜರಾಮರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕಾಂಗದ ಬದುಕಿನಲ್ಲಿ ದೇವೇಗೌಡರಿಗೆ ಅಧಿಕಾರ ಸಿಕ್ಕಿದ್ದು ತುಂಬಾ ಕಡಿಮೆ, 4 ವರ್ಷಗಳ ಕಾಲ ಮಂತ್ರಿ, ಒಂದೂವರೆ ವರ್ಷ ಮುಖ್ಯಮಂತ್ರಿಯಾಗಿ ಮತ್ತು 10 ತಿಂಗಳು ಪ್ರಧಾನಿಯಾಗಿ ಅವರು ಅಧಿಕಾರ ಅನುಭವಿಸಿದ ಒಟ್ಟು ಅವಧಿ ಸುಮಾರು 6 ವರ್ಷ 4 ತಿಂಗಳು. ಆರು ದಶಕ ಮೀರಿದ ಸುದೀರ್ಘ ಹಾಗೂ ನಿರಂತರ ರಾಜಕೀಯ ಬದುಕಿನಲ್ಲಿ 6 ವರ್ಷ 4 ತಿಂಗಳು ಅಧಿಕಾರ ನಡೆಸಿದ್ದು ಬಿಟ್ಟರೆ ಜೀವನದುದ್ದಕ್ಕೂ ಹೋರಾಟದ ರಾಜಕೀಯ ಮಾಡಿದವರು ಎಂದು ನೆನಪಿಸಿಕೊಂಡರು.

ಹಳ್ಳಿಯ ಯುವಕನೊಬ್ಬ 29ನೇ ವಯಸ್ಸಿಗೆ ಶಾಸಕನಾಗಿ, ನಂತರ ವಿರೋಧ ಪಕ್ಷದ ನಾಯಕನಾಗಿ, ಮಂತ್ರಿಯಾಗಿ, ಸಂಸದನಾಗಿ, ಮುಖ್ಯಮಂತ್ರಿಯಾಗಿ, ರಾಷ್ಟ್ರದ ಪ್ರಧಾನಿಯಾಗಿ ಈಗ 92ರ ಇಳಿವಯಸ್ಸಿನಲ್ಲಿಯೂ ಜನರಿಗಾಗಿ ಹೋರಾಟ ಮಾಡುತ್ತಿದ್ದಾರೆ ಎಂದರು.

### ಜಿಲ್ಲಾದ್ಯಂತ ವಿವಿಧ ಕಾರ್ಯಕ್ರಮ

ಹಾಸನ ಸೇರಿದಂತೆ ಜಿಲ್ಲೆಯ ವಿವಿಧೆಡೆ ಭಾನುವಾರ ಮಾಜಿ ಪ್ರಧಾನಿ ಹಾಗೂ ರಾಜ್ಯಸಭೆ ಸದಸ್ಯ ಹೆಚ್.ಡಿ. ದೇವೇಗೌಡ ಅವರ 93ನೇ ಹುಟ್ಟು ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಜೆಡಿಎಸ್ ಕಾರ್ಯಕರ್ತರು, ಜನಪ್ರತಿನಿಧಿಗಳು ಹಾಗೂ ಅಭಿಮಾನಿಗಳು ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಹಾಸನದ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ನೆರವೇರಿಸಲಾಯಿತು. ಸರ್ಕಾರಿ ಆಸ್ಪತ್ರೆಗಳಲ್ಲಿನ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮೂಲಕ ಹೆಚ್.ಡಿ. ದೇವೇಗೌಡರ ಹುಟ್ಟುಹಬ್ಬಕ್ಕೆ ಅರ್ಥ ಕಲ್ಪಿಸಲಾಯಿತು.

ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ, ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ನಾಗರಾಜು, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸುಮುಖ ರಘುಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬೈಲಹಳ್ಳಿ ಸತ್ಯನಾರಾಯಣ, ಮಾಜಿ ಉಪಾಧ್ಯಕ್ಷ ದುದ್ದ ಲಕ್ಷ್ಮಣಗೌಡ, ನಗರಸಭೆ ಮಾಜಿ ಅಧ್ಯಕ್ಷ ಹೆಚ್.ಎಸ್. ಅನಿಲ್ ಕುಮಾರ್, ಶಂಕರ್, ಜೆಡಿಎಸ್ ವಕ್ತಾರ ಹೊಂಗೆರೆ ರಘು, ನಗರಸಭೆ ಸದಸ್ಯರಾದ ವಾಸುದೇವ್, ಚಂದ್ರೇಗೌಡ, ಮುಖಂಡರಾದ ಶಿವಣ್ಣ, ರಾಮಕೃಷ್ಣೇಗೌಡ, ಗೋಪಾಲ್, ಸಮೀರ್, ಬಾಲಕೃಷ್ಣ ಹಾಗು ಇತರರಿದ್ದರು.

# ಹೊಯ್ಸಳರ ನೆನಪುಗಳು ಸರಣಿ-6

## ಹೊಯ್ಸಳರ ಮಹಾ ಶಿಲ್ಪಿ ನಂದಿಯ ಬೈಚೋಜ




ನುಗ್ಗೆಹಳ್ಳಿ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲಯದ ಶಿಲ್ಪ ಕಲೆಗಳ ಕೆತ್ತನೆಗಳಲ್ಲಿ ವಿಶೇಷತೆಯನ್ನು ಗಮನಿಸಬಹುದು. ದೇವಾಲಯದ ದಕ್ಷಿಣ ದಿಕ್ಕಿನ ವಿಗ್ರಹಗಳನ್ನು ನಂದಿಯ ಬೈಚೋಜ ಹಾಗೂ ಉತ್ತರ ದಿಕ್ಕಿನ ವಿಗ್ರಹಗಳನ್ನು ಮಲ್ಲಿತಮ್ಮ ಮೂಡಿಸಿರುತ್ತಾರೆ. ದಕ್ಷಿಣ ದಿಕ್ಕಿನ ಅತ್ಯಮೋಘವಾದ ವಿಗ್ರಹಗಳನ್ನು, ಶಿಲ್ಪಗಳ ಕೆಳಗೆ ಬಿರುದುಗಳ ಸಮೇತ ತನ್ನ ಹೆಸರನ್ನು ನಂದಿಯ ಬೈಚೋಜ ಮೂಡಿಸಿದ್ದಾನೆ.

ಇದಲ್ಲದೆ ನಾಗಲಪುರದ ಶ್ರೀ ಕೇದಾರೇಶ್ವರ ದೇವಾಲಯದಲ್ಲೂ ಈತನ ಕೆತ್ತನೆಗಳನ್ನು ಕಾಣಬಹುದು. ಹೊಯ್ಸಳರ ಮಹಾ ಶಿಲ್ಪಿ ಮಲ್ಲಿತಮ್ಮನ ಸರಿಸಾಟಿಯಾಗಿ ಅತ್ಯಮೋಘವಾದ ಶಿಲ್ಪ ಕಲಾ ಕೃತಿಗಳನ್ನು ನೀಡಿದ ನಂದಿಯ ಬೈಚೋಜನ ಅದ್ಭುತ ಕೈಚಳಕದ ಕಾರ್ಯ ಕೇವಲ ನುಗ್ಗೆಹಳ್ಳಿಯ ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಹಾಗೂ ನಾಗಲಾಪುರದ ಕೇದಾರೇಶ್ವರ ದೇವಾಲಯದಲ್ಲಿ ಮಾತ್ರವೇ ಕಂಡುಬರುವುದು ಆಶ್ಚರ್ಯವೇ ಹೌದು. ಇಂತಹ ಮಹಾಶಿಲ್ಪಿಯ ಕೆತ್ತನೆಗಳು ಅಂದಿನ ಕಾಲದ ಬೇರಾವ ದೇವಾಲಯಗಳಲ್ಲಿ ಕಂಡು ಬರದಿರುವುದು ಸಂಶೋಧನಾರ್ಹ.

ಶ್ರೀ ಅಮರನಾರಾಯಣ/ ಪರವಾಸದೇವ ವಿಗ್ರಹ,ಕೆಳಗಡೆ ಗರುಡ ಪ್ರಹ್ಲಾದ ದೇವತೆಗಳು ಎಡಗಡೆ ದೇವಿ ಕಳಶ ಚಾಮರ. ಪೀಠದಲ್ಲಿ ನಂದಿಯ ಬೈಚೋಜನ ಹೆಸರಿದೆ.

**- ಡಾ. ಎನ್. ರಮೇಶ್, ಹಾಸನ**

# ಸಂಸ್ಕೃತಿ ಗೌರವಿಸುವುದು ಎಲ್ಲರ ಕರ್ತವ್ಯ



ಚನ್ನರಾಯಪಟ್ಟಣ: ದೇಶಿಯ ಸಂಸ್ಕೃತಿಯನ್ನು ಸದಾಕಾಲ ಗೌರವಿಸಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.


ತಾಲ್ಲೂಕಿನ ಹಿರೀಸಾವೆ ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ 2024-25ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ರೆಡ್ ಕ್ರಾಸ್ ಮತ್ತು ರೆಡ್ ರಿಬ್ಬನ್ ಸಹಯೋಗದಲ್ಲಿ ಏರ್ಪಡಿಸಿದ್ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಮೌಲ್ಯಯುತ ಶಿಕ್ಷಣದ ಜತೆಗೆ ಸಾಂಸ್ಕೃತಿಕ ಚಟುವಟಿಕೆಗಳಿಗೂ ಸಹ ವಿದ್ಯಾರ್ಥಿಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ದೇಶಿಯ ಕಲೆ ಹಾಗೂ ಸಂಸ್ಕೃತಿಯನ್ನು ಮರೆತರೆ ನಮ್ಮನ್ನು ನಾವೇ ಮರೆತಂತೆ. ಕ್ರೀಡೆಗಳಿಗೆ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ನೀಡಬೇಕು. ಕ್ರೀಡೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಕೊಂಡರೆ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ. ಓದಿನ ಕಡೆಗೂ ಗಮನ ಹರಿಸಬೇಕು ಎಂದು ತಿಳಿಸಿದರು.

ಸಾಂಸ್ಕೃತಿಕ ಮತ್ತು ಕ್ರೀಡಾ ವಿಭಾಗದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಅಭಿನಂದಿಸಲಾಯಿತು. ಪ್ರಾಂಶುಪಾಲ ಬಿ.ಎಚ್. ಲಕ್ಷ್ಮಣ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸಿದ್ದಲಿಂಗೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ಆರ್. ಗೋವಿಂದರಾಜು, ಉಪನ್ಯಾಸಕರಾದ ಆನಂದ್, ಮಂಜುನಾಥ್, ಕುಮಾರ್ ಇತರರು ಇದ್ದರು.

# ದೇಸಾಯಿ ಸ್ಟುಡಿಯೋದಲ್ಲಿ 4 ದಿನಗಳ ಕಾರ್ಯಾಗಾರ ಯಶಸ್ವಿ

ಹಾಸನ: ನಗರದ ಚಿತ್ರಕಲಾ ಫೌಂಡೇಶನ್ ಹಾಗು ಬೆಂಗಳೂರಿನ ಕೃಷ್ಣ ಸೆಟ್ಟಿ ಫೌಂಡೇಶನ್ ವತಿಯಿಂದ ನಗರದ ದೇಸಾಯಿ ಸ್ಟುಡಿಯೋದಲ್ಲಿ 4 ದಿನಗಳ ನೆಕ್ಸ್ಟ್ - ಸ್ಟೆಪ್ ಕಾರ್ಯಾಗಾರ 2 ಹಮ್ಮಿಕೊಳ್ಳಲಾಗಿತ್ತು.



ರಾಜ್ಯದ ಬೇರೆ ಬೇರೆ ಪ್ರದೇಶದ ಕಲಾವಿದರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಬದಲಾದ ಕಾಲಘಟ್ಟದಲ್ಲಿ ಕಲಾವಿದರು ಹೇಗೆ ತಮ್ಮೊಳಗಿನ ಆಲೋಚನಾ ಲಹರಿ, ಕಲಾಕೃತಿಗಳ ರಚನೆಯ ಸಂದರ್ಭದಲ್ಲಿ ಮಾಧ್ಯಮಗಳ ಒಳಗೊಳ್ಳುವಿಕೆ, ವ್ಯಕ್ತಿತ್ವ ವಿಕಸನ, ಈ ಸಂದರ್ಭದ ಅನಿವಾರ್ಯತೆ ಸೇರಿ ಹಲವು ವಿಚಾರಗಳ ಚರ್ಚೆ ಕಾರ್ಯಾಗಾರದಲ್ಲಿ ನಡೆಯಿತು.

ಡಿಜಿಟಲ್ ಯುಗದಲ್ಲಿ ಕಲೆ-ಕಲಾವಿದರು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದಾರೆ ಎನ್ನುವುದರ ಕುರಿತು ಸಾಕ್ಷ್ಯ ಚಿತ್ರಗಳ ಸಮೇತ ವಿವರಿಸಲಾಯಿತು. ಪ್ರತಿಯೊಬ್ಬ ಕಲಾವಿದರೂ ಈ ವರೆಗಿನ ಕಲಾ ಪಯಣದ ಅನುಭವ ಹಂಚಿಕೊಂಡರು. ತಾವು ರಚಿಸಿರುವ ಕಲಾಕೃತಿಗಳನ್ನು ಪ್ರದರ್ಶಿಸಿ ರಚನಾ ಕ್ರಮದ ಕುರಿತು ವಿವರಿಸಿದರು.

ಕಲಾಕೃತಿಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಿರುವ ಹೊಸತನಗಳ ಬಗ್ಗೆಯೂ ಉಳಿದ ಕಲಾವಿದರು ಪರಸ್ಪರ ಸಲಹೆಗಳನ್ನು ನೀಡಿ ಚರ್ಚಿಸಿದರು. ಕೇಂದ್ರ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಚಿ.ಸು. ಕೃಷ್ಣ ಸೆಟ್ಟಿ ಅವರ ಮಾರ್ಗದರ್ಶನದಲ್ಲಿ ಕಾರ್ಯಾಗಾರ ನಡೆಯಿತು. ಹಿರಿಯ ಕಲಾವಿದರಾದ ವಿ. ಹರಿರಾಮ್, ಹೆಚ್.ಎಸ್. ವೇಣುಗೋಪಾಲ, ಪ್ರಭು ಹರಸೂರು, ಕಿಶೋರ್ ಕುಮಾರ್, ಕೆ.ಜಿ. ಲಿಂಗದೇವರು, ಬಿ.ಎಸ್. ದೇಸಾಯಿ, ಕರಿಯಪ್ಪ ಹಂಚಿನಮನಿ, ಕೋಟೆಗದ್ದೆ ರವಿ, ಗಣಪತಿ ಅಗ್ನಿಹೋತ್ರಿ, ಆನಂದ ಬೇಕ್ವಾಡ್, ಹರೀಶ್ ಮಲ್ಲಪ್ಪನವರ್ ಪಾಲ್ಗೊಂಡಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248